

## ರಿಟೈರ್‌ಮೆಂಟು

ನನ್ನವರು ತಮ್ಮ ಅನಾರೋಗ್ಯದ ಕಾರಣ ಬ್ಯಾಂಕ್ ಕೆಲಸದಿಂದ ಸ್ವಯಂನಿವೃತ್ತಿ ಪಡಕೊಂಡಿದ್ದರು. ನಮ್ಮ ಮೊಮ್ಮಗ ಐದು ವರ್ಷದ ವೇದಾಂತನಿಗೆ ಅಜ್ಜ ಮನೆಯಲ್ಲೇ ಇರುತ್ತಾರೆ ಎಂದು ಖುಷಿಯೋ ಖುಷಿ. ದಿನವಿಡೀ ಅಜ್ಜನೊಂದಿಗೆ ತಿರುಗಲು ಹೋಗುವುದು. ಐಸ್‌ಕ್ರೀಮ್, ಕೇಕು, ಚಾಕಲೇಟು, ಬಿಸ್ಕತ್ತುಗಳ ಸಮಾರಾಧನೆ. ಮೇ ತಿಂಗಳು ಮುಗಿದು ಜೂನ್‌ನಲ್ಲಿ ಅವನ ಶಾಲೆ ಆರಂಭವಾಯಿತು. ಇವನಿಗೆ ಅಜ್ಜನನ್ನು ಬಿಟ್ಟು ಹೋಗುವ ಮನಸ್ಸಿಲ್ಲ.

'ಅಜ್ಜ ಅಜ್ಜಿ ನಾನೂ ಸ್ಕೂಲಿನಿಂದ ರಿಟೈರ್‌ಮೆಂಟು ತೆಗೆದುಕೊಳ್ಳುತ್ತೇನೆ. ಇಬ್ಬರೂ ಒಟ್ಟಿಗೆ ಮಜಾ ಮಾಡೋಣ' ಎನ್ನುವುದೇ ನಮ್ಮ ವೇದಾಂತ. ಕೇಳಿ ನಮ್ಮಗೆಲ್ಲಾ ನಗುವೋನಗು.

**ರಾಜಲಕ್ಷ್ಮಿ ವಿ. ಶೆಣೈ, ಬೆಂಗಳೂರು**

## ವ್ಯತ್ಯಾಸ ತಿಳೀವಲ್ದು

ನಮ್ಮ ಉತ್ತರ ಕರ್ನಾಟಕದ ಹಿರಿಯ ಮಹಿಳೆಯರು ತಲೆ ತುಂಬಾ ಸೆರಗು ಹೊದ್ದುಕೊಳ್ಳುವುದು ಸಂಪ್ರದಾಯ. ಹೀಗೊಂದು ದಿನ ಬಸ್ಸಿನಲ್ಲಿ ಹೋಗುವಾಗ ಅಜ್ಜಿಯೊಬ್ಬಳು ಬಿಸಿಲ ಧಗೆಯಿಂದ ಬಳಲಿ ಸೆರಗಿನಿಂದ ಗಾಳಿ ಹಾಕಿಕೊಳ್ಳುತ್ತಿದ್ದಳು. ಕಾಲೇಜು ಪೋರನೊಬ್ಬ ಕೂದಲನ್ನು ಸ್ಟೈಲಾಗಿ ಪೋನಿ ಕಟ್ಟಿದ್ದ. ಆ ಅಜ್ಜಿಯ ಹಿಂದಿನ ಸೀಟಿನಲ್ಲಿ ಕೂತು ಅಜ್ಜಿಯನ್ನು ಗಮನಿಸತೊಡಗಿದ.

ಮುಂದಿನ ನಿಲ್ದಾಣದಲ್ಲಿ ದೋತರ ಉಟ್ಟು, ತಲೆಗೆ ರುಮಾಲು ಸುತ್ತಿ, ಕೈಲಿ ಬಿದಿರು ಬಿಡಿಗೆ ಹಿಡಿದು ಅಜ್ಜನೊಬ್ಬ ಬಸ್ಸು ಹತ್ತುತ್ತಿದ್ದಂತೆ ಅಜ್ಜಿ ತಡಬಡಿಸಿ ತಲೆ ತುಂಬಾ ಸೆರಗು ಹೊದ್ದು ಕೂತಳು. ಕುಚೇಷ್ಟೆಯ ಹುಡುಗ ಸುಮ್ಮನಿರದೆ 'ಅಜ್ಜೀ... ನಾನು ಬಸ್ಸು ಹತ್ತಿ ನಿನ್ನ ಮುಂದೇನ ಹಾದಿನಿ... ಆಗ ಸೆರಗ ಹೊದಿಲಿಲ್ಲ... ಆ ಅಜ್ಜ ಬರಾನ ಸೆರಗ ಹೊರ್ತೀ?' ಎಂದು ಹಲ್ಲು ಕಿರಿದ. ಈಗೀನ ಹುಡ್ಗೀರು ತಲೀ ಬೋಳಸ್ಕೋತಾರ, ಪ್ಯಾಂಟಾ, ಅಂಗೀ ಹಾಕೋತ್ತಾರ.... ಹೆಣ್ಯಾವುದು, ಗಂಡ್ಯಾವುದು ತಿಳೀಲಾರ್ದಂಗ ಆಗ್ಯಾದ... ನೀನೀಗ ಕೇಳ್ದಾಗ ನೋಡೋ ನೀ ಹುಡುಗನ್ನೋದು ಗೊತ್ತಾಗಿದ್ದು' ಎಂಬ ಅಜ್ಜಿಯ ಖಡಕ್ ನುಡಿಗೆ ಹುಡುಗ ಇಂಗು ತಿಂದ ಮಂಗನಂತಾಗಿದ್ದ.


ಚಿತ್ರಗಳು: ಗಣೇಶ್ ಆಚಾರ್ಯ

**ನಳಿನಿ ಸುನೀಲಕುಮಾರ ಸುಧಾಕರ, ವಿಜಯಪುರ**